Reg.No. M. 1550.
KODAGU' MERCARA, (Coorg).

-16-

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೪-೦.

ಸಂಪುಟ ೨೫ | ತಾರೀಕು ೧೫—೯—೧೯೪೪ನೇ ಶುಕ್ರವಾರ. | ಸಂಚಿಕೆ ೧೫

ಗಾಂಧಿ ಜಿನ್ನಾ ಮಾತುಕತೆ.

ಇಡೀ ಜಗತ್ತೆ ಮುಂದೆ ನೋಡುತ್ತಿದ್ದ ಭಾರತದ ಮಹಾವ್ಯಕ್ತಿಗಳಾದ ಗಾಂಧಿ-ಜಿನ್ನಾರವರ ಭೇಟಿಯು ತಾ. 9-9-44ರ ಸಾಯಂಕಾಲ 4 ಗಂಟೆಗೆ ಪ್ರಾರಂಭವಾಯಿತು. ಭೇಟಿಯು ಇನ್ನೂ ಮುಂದರಿಯುತ್ತಿದೆ.

ಗಾಂಧೀಯವರು ಜಿನ್ನಾರವರ ಭೇಟಿ ತೆಗೆದುಕೊಳ್ಳಕೂಡದೆಂದು ಹಿಂದೂ ಮಹಾಸಭೆಯವರು ಸಾರುತ್ತಿದ್ದರಷ್ಟೆ. ಇದರ ಆಶ್ರಯದಲ್ಲಿ ಅಖಿಲ ಭಾರತ ಪಾಕಿಸ್ತಾನ ವಿರೋಧ ಪಕ್ಷವೊಂದಾಗಿ ಅದರ ಕಾರ್ಯದರ್ಶಿಗಳಿದ ಶ್ರೀ ತಾಟಿಯವರು ಗಾಂಧೀಯವರ ಆಶ್ರಮದ ಮುಂದೆ ಕೆಲವು ಜನರೊಡನೆ ಸತ್ಯಾಗ್ರಹ ಮಾಡತೊಡಗಿದರು. ಈ ಸತ್ಯಾಗ್ರಹಿಗಳ ಗಲಭೆ ಜೋರಾಗತೊಡಗಿತು. ಅಲ್ಲಿಯು ಮುಸ್ಲಿಮರು ಸಹ ಹಿಂದೂ ಮಹಾಸಭೆಯ ಈ ನೀತಿಗೆ ವಿರುದ್ಧ ಕಾರ್ಯಕ್ರಮ ಕೈಕೊಳ್ಳಬೇಕೆಂದು ಪರ್ಯಾಲೋಚಿಸುತ್ತಿದ್ದರಂತೆ. ಅಷ್ಟರಲ್ಲಿ ಅಲ್ಲಿಯ ಜಿಲ್ಲಾ ಪೊಲೀಸ್ ಸುಪರಿಂಟಿಂಡೆಂಟರು ಹಾಗೆ ಪ್ರದರ್ಶನಮಾಡಲಿಕ್ಕೆ ಕೂಡದೆಂದೂ, ಅಲ್ಲಿಯ ಶಾಂತಿಭಂಗವಾಗುವಂತಿದೆಯೆಂದೂ, ಅಲ್ಲೇ ಕೋಮುವಾರು ಘರ್ಷಣೆಯಾಗುವ ಚಿಹ್ನೆಯಿದೆಯೆಂದೂ, ಆದ್ದರಿಂದ ತಮ್ಮ ಪ್ರದರ್ಶನವನ್ನು ನಿಲ್ಲಿಸಬೇಕೆಂದೂ ತಾಟಿಯವರಿಗೆ ನೋಟೀಸು ಕೊಟ್ಟರು. ಅವರು ಅದನ್ನು ಉಲ್ಲಂಘಿಸಿದ್ದರಿಂದ ಅವರನ್ನು ಪೊಲೀಸರು ಕೆಲವು ಅನುಯಾಯಿಗಳೊಡನೆ ದಸ್ತಗಿರಿ ಮಾಡಿದರು. ದಸ್ತಗಿರಿ ಮಾಡಿದ ನಂತರ ಅವರನ್ನು ಜಪ್ತಾಯಿಸುವಾಗ ತಾಟಿಯವರ ಉಡುಪಿನೊಳಗೆ ಉದ್ದವಾದ ಕತ್ತಿಯೊಂದಿದ್ದುದು ಕಂಡು ಬಂದಿದೆ.

ಮಹಾತ್ಮ ಗಾಂಧಿಯವರು ತಮ್ಮ ಪರಿವಾರದವರೊಡನೆ ತಾ. 9 ರಲ್ಲಿ ಬೊಂಬಾಯಿಗೆ ಬಂದರು. ರೈಲು ಬರಲು 3 ಗಂಟೆಗಳ ವಿಳಂಬವಾಗಿತ್ತು. ಬೊಂಬಾಯಿಯ ಮೇಯರರು, ಭುಲಾಬಾಯಿ ದೇಸಾಯಿ, ಸರೋಜಿನಿ ದೇವಿ, ಬಿ. ಜಿ. ಖೇರ್, ಡಾ. ಗಿಲ್ಡರ್ ಮೊದಲಾದವರು ರೈಲ್ವೆ ನಿಲ್ದಾಣದಲ್ಲಿ ಕಾದಿದ್ದು ಅವರನ್ನು ಸ್ವಾಗತಿಸಿದರು.

ತಾ. 9ರ ಸಾಯಂಕಾಲ 4 ಗಂಟೆಗೆ ಜಿನ್ನಾ ಗಾಂಧಿ ಭೇಟಿ ಪ್ರಾರಂಭವಾಯಿತು. ಮೂರು ಗಂಟೆಗಳ ಕಾಲ ಮಾತುಕತೆ ನಡೆದು ತಾ. 11ರ ಸಾಯಂಕಾಲ 5-30 ಗಂಟೆಯಿಂದ ಪುನಹ ಮಾತುಕತೆ ಪ್ರಾರಂಭಿಸುವದೆಂದು ನಿಶ್ಚಯಿಸಲಾಯಿತು. ಪ್ರಥಮ ದಿನ ನಡೆದ ಮೂರು ಗಂಟೆಗಳ ಮಾತುಕತೆಯಲ್ಲಿ ಮಹಾತ್ಮ ಗಾಂಧಿಯವರು ರಾಜಗೋಪಾಲಾಚಾರಿಯವರ ಯೋಜನೆಯನ್ನು ಕೂಲಂಕುಶವಾಗಿ ಜಿನ್ನಾರವರಿಗೆ ವಿವರಿಸಿ ಹೇಳಿದರಂತೆ. ಜಿನ್ನಾರವರು ಪ್ರಾಮುಖ್ಯ ವಿಚಾರಗಳನ್ನು ಬರೆದಿಟ್ಟುಕೊಂಡಿರುವರಂತೆ. ಆ ವುಗಳನ್ನು ಪುನಹ ವಿವೇಚಿಸಿ ಸೋಮವಾರದ ಮಾತುಕತೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯೆಕ್ತಮಾಡಲಿರುವರಂತೆ. ತಾ. 10 ಆದಿತ್ಯವಾರವಾಗಿ ರಂಝಾನಿನ 21 ನೇ ದಿನವಾದ್ದರಿಂದ ಆ ದಿನ ಭೇಟಿಯಿಡಲಿಲ್ಲ. ಪ್ರಥಮ ದಿನದ ಭೇಟಿ ಕಳೆದು ಈ ಬೃಹದ್ವ್ಯಕ್ತಿಗಳು ಹೊರಬಂದಾಗ ಇಬ್ಬರೂ ಹರ್ಷಚಿತ್ತರಾಗಿದ್ದರಂತೆ. ಜಿನ್ನಾರವರ ಮನೆಯ ಆವರಣದಲ್ಲಿ ತುಂಬಿದ್ದ ಪತ್ರಿಕಾ ಪ್ರತಿನಿಧಿಗಳನ್ನು ನೋಡುತ್ತಾ, ಗಾಂಧಿಜಿಯವರು 'ಏನು ಬೇಕಾದರೂ ಜಿನ್ನಾರವರನ್ನು ಕೇಳಬೇಕೆಂದು' ನಗುವಿನಿಂದ ಹೇಳಿದರಂತೆ. ಅವರು ಹೊರಗೆ ಬಂದೊಡನೆಯೇ ಹಲವಾರು ಭಾವಚಿತ್ರ ಗ್ರಹಣಯಂತ್ರಗಳ ಕಿಟಕಿಟ ಶಬ್ದವೂ ಜನರ ಕಾತುರವೂ ಹೆಚ್ಚಾಯಿತಂತೆ.

ಭೇಟಿಗೆ ನಿಶ್ಚಿತವಾದ ಸಮಯಕ್ಕೆ ಸರಿಯಾಗಿ ಮೂಮೂಲಿನ ತನ್ನ ಉಡುಪಿನಲ್ಲಿ ಅರ್ಧನಗ್ನ ಗಾಂಧಿಯವರು ಜಿನ್ನಾರವರ ಮನೆಗೆ ಬಂದರಂತೆ. ಜಿನ್ನಾರವರು ಜಿನ್ನಾಗಿ ಇಸ್ತ್ರಿಮಾಡಿದ ಅರಿನ ಬಣ್ಣದ ಸಿಲ್ಕ್ ಸೂಟ್ ಧರಿಸಿ, ಕೆಂಪು ಟೈ ಕಟ್ಟಿದ್ದರಂತೆ. ಗಾಂಧೀಜಿಯವರು ಜಿನ್ನಾರವರ ಹೆಗಲಿನ ಮೇಲೆ ಕೈ ಹಾಕಿ ತಬ್ಬಿಕೊಂಡರಂತೆ.

ಮಾತುಕಥೆಯಲ್ಲಿ ಏನಾಗಿದೆ, ಒಪ್ಪಂದದ ಸಾಧ್ಯತೆಯಿದೆಯೇ ಎಂಬುದು ತಿಳಿದುಬಂದಿರುವದಿಲ್ಲ. ತಾ. 11ರ ಭೇಟಿಗಾಗಿ ಇಬ್ಬರೂ ತಯಾರಮಾಡಿಕೊಳ್ಳುತ್ತಿರುವರಂತೆ. ಪ್ರಥಮ ದಿನದ ಭೇಟಿಯಲ್ಲಿದ್ದ ಸರ್ವ ವಿಷಯಗಳನ್ನೂ ಗಾಂಧಿಯವರು ರಾಜಗೋಪಾಲಾಚಾರಿಯವರಿಗೆ ಹೇಳಿರುವರಂತೆ. ಈ ಭೇಟಿಯ ಸಂದರ್ಭದಲ್ಲಿ ಅತ್ಯಂತ ಸಂತೋಷದಲ್ಲಿರುವ ವ್ಯಕ್ತಿಯೆಂದರೆ ರಾಜಾಜಿಯವರಂತೆ. ಎರಡು ವರ್ಷಗಳ ಹಿಂದೆ ತಾನು ಈ ಯೋಜನೆಯನ್ನು ಮುಂದೆ ಇಟ್ಟಾಗ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಅದನ್ನು ನಿರಾಕರಿಸಲು ಯಾವ ಯೋಜನೆಗಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯತನವನ್ನು ಬಲಿಕೊಟ್ಟರೋ ಅದೇ ಯೋಜನೆಯ ಚರ್ಚೆ ಇಂದು ಆಗುತ್ತಿರುವಾಗ ಆನಂದವಾಗುವದು ಸ್ವಾಭಾವಿಕವಲ್ಲವೇ?

ಯುದ್ಧಕ್ಕೆ ಸೇರುವ ಮೊದಲು.

ಜರ್ಮನಿಯು ಗುಪ್ತಚಾರರ ನಾಯಕನಾದ ಹಿನ್‌ರಿಚ್ ಹಿಮ್ಲೆರ್ ರಣರಂಗಕ್ಕೆ ತೆರಳುವ 18 ವರ್ಷದ ತ್ಯಾಯುದವರಿಗೆಲ್ಲ 'ನೊದಲು ಮದುವೆಯಾಗಿ ಮಕ್ಕಳಾದ ಮೇಲೆ ರಣಭೂಮಿಗೆ ಹೋಗಿ' ಎಂದು ಬೋಧಿಸುತ್ತಿದ್ದಾನೆ. ಕಾರಣವಿಷ್ಟೆ: 'ಈಗಿನ ಯುದ್ಧದಲ್ಲಿ ಪರಾಭವವಾದರೂ, ಇಂದಿನ ಯೋಧರ ಮಕ್ಕಳು ನಾಳೆಯ ಯುದ್ಧವನ್ನು ಗೆಲ್ಲಬಲ್ಲರು.' ಪ್ರತಿಯೊಂದು ಜರ್ಮನ್ ಸಂಸಾರದಲ್ಲೂ ಸರಾಸರಿ ಎರಡಾಲ್ಕು ಮಕ್ಕಳಿರಬೇಕೆಂದು ಜರ್ಮನ್ ಸೈನ್ಯಾಧಿಕಾರಿಗಳು ಸೂಚಿಸಿದ್ದಾರೆ. ಇದಕ್ಕೆ ಕಾರಣ: '1944ರಲ್ಲಿ ಹುಟ್ಟಿದ ಪ್ರತಿಯೊಬ್ಬ ಆರೋಗ್ಯವಂತನಾದ ಹುಡುಗ 1963 ರಲ್ಲಿ ವೀರ ಯೋಧನಾಗಬಲ್ಲ'

—೦೦—

೫ ವರ್ಷದ ಯುದ್ಧದಲ್ಲಿ ಬ್ರಿಟಿಷ್ ರಾಜ್ಯಕ್ಕಾದ ಹಾನಿ.

ಇಂದಿನ ಮಹಾಯುದ್ಧವಾರಂಭವಾದಾಗಿನಿಂದ ಇಂದಿನ ವರೆಗೆ ಬ್ರಿಟಿಷ್ ಸಾಮ್ರಾಜ್ಯದ ಸೇನೆಗಳಿಗಾದ ಸಾವು-ನೋವುಗಳ ಅಂಕೆಗಳನ್ನು ಕೆಳಗೆ ಕೊಡಲಾಗಿದೆ.

ಯುದ್ಧದಲ್ಲಿ ಸತ್ತವರು 2,42,995; ಕಾಣೆಯಾದವರು 80,603; ಗಾಯಹೊಂದಿದವರು 3,11,500; ಯುದ್ಧ ಕೈದಿಗಳು 2,90,865; ನೌಕಾ ಪಡೆಗೆ ಹೊಂದಿದ್ದ 33,573 ಜನರಿಗೆ ಸಾವುನೋವುಗಳಾಗಿದ್ದು ಅವರಲ್ಲಿ 29,381 ಸತ್ತಿರುವರು. ವಿಮಾನ ಧಾಳಿಯಲ್ಲಿ 1,32,092 ನಾಗರಿಕರಿಗೆ ಸಾವುನೋವುಗಳಾಗಿವೆ. ಇವರಲ್ಲಿ ಸತ್ತವರು 56,195 ಜನರು. ಒಟ್ಟಿಗೆ ಎಲ್ಲ ಕಾರಣಗಳಿಂದ ಸಾವುನೋವುಗಳಿಗೀಡಾದವರ ಸಂಖ್ಯೆ 10 ಲಕ್ಷವಿರುತ್ತದೆ.

—೦೦—

ಬಂಗಾಳದಲ್ಲಿ ಮುತ್ತೈದೆ ಕ್ಷಾಮದ ಸೂಚನೆ.

ಬಂಗಾಳದಲ್ಲಿ ಮುತ್ತೈದೆ ಕ್ಷಾಮವು ಬರುವ ಸೂಚನೆಗಳಿವೆ. ಬ್ರಿಟಿಷ್ ಸರ್ಕಾರವು ಕೂಡಲೇ ಆಹಾರ ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕು ಎಂದು ಇಂಡಿಯಾ ಸರ್ಕಾರವು ಬ್ರಿಟಿಷ್ ಸರ್ಕಾರಕ್ಕೆ ಒತ್ತಾಯಮಾಡುತ್ತಿದೆ ಎಂದು ಗೊತ್ತಾಗಿದೆ.

ಇಂಡಿಯಾಕ್ಕೆ ಅಮೇರಿಕಾದಿಂದಲೂ ಆಹಾರ ಸರಬರಾಜು ಆಗಬೇಕು. ಜಹಜುಗಳನ್ನು ಒದಗಿಸಬೇಕು ಎಂದು ಅಮೇರಿಕ ಡೆಲ್ಲಿ ಕಚೇರಿಯ ಸೆಕ್ರೆಟರಿ ಮಿ. ಎಲ್.- ಬೆರಿಯವರು ವಾಷಿಂಗ್‌ಟನ್ನಿಗೆ ತಿಳಿಸಿದ್ದಾರೆ. ಮತ್ತು ಇವರು ಈಗ ವಾಷಿಂಗ್‌ಟನ್ನಿಗೆ ಹೋಗಿದ್ದಾರೆ. ಅಧ್ಯಕ್ಷ ರೂಸ್‌ವೆಲ್ಟರಿಗೆ ಎಲ್ಲವನ್ನು ಹೇಳಬಹುದು.

—೦೦—

ಭಾರತದ ವಿಭಜನೆಗೆ ವಿರೋಧ.

ಅಖಂಡ ಹಿಂದೂಸ್ಥಾನ ಅಖಿಲ ಭಾರತ ಮುಖಂಡರ ಸಮ್ಮೇಳನವು ದಿಲ್ಲಿಯಲ್ಲಿ ಅಕ್ಟೋಬರ್ ೫ ಮತ್ತು ೬ ರಲ್ಲಿ ನಡೆಯುವಂತೆ ಡಾ. ಎ. ಕೆ. ಸಾವ್ಲರ್ ಕರೆಯರವರು ಏರ್ಪಡಿಸಿರುತ್ತಾರೆ. ಸಮ್ಮೇಳನದ ಅಧ್ಯಕ್ಷರ ಹೆಸರನ್ನು ಹಿಂದಳಿಂದ ತಿಳಿಸಲಾಗುವುದು. 'ಭಾರತವನ್ನು ಯಾವ ಕಾರಣದಿಂದಲೂ ವಿಭಾಗಮಾಡಕೂಡದು. ಹಿಂದೂಸ್ಥಾನದ ಐಕ್ಯತೆಗೆ ಭಂಗ ಬರಕೂಡದು' ಎಂಬ ಒಂದೇ ನಿರ್ಣಯವು ಚರ್ಚೆಗೆ ಬರುವುದು. ಸಮ್ಮೇಳನಕ್ಕೆ ಶ್ರೀಗಳಾದ ಡಾ. ಜಿ. ಎಸ್. ಆರುಂಡೇಲ್, ಎನ್. ಜೆ. ಕೇಳ್ಕರ್, ಡಾ. ಶ್ಯಾಮಪ್ರಸಾದ ಮುಖರ್ಜಿ, ಡಾ. ಮೂಂಜೆ, ಸರ್. ಜೆ. ಪಿ. ಶ್ರೀವಸ್ತವ, ಡಾ. ವರದರಾಜುಲು ನಾಯಿಡು, ಮಾಸ್ಟರ್ ತಾರಾಸಿಂಗ್, ಭಾಯಿ ಪರಮಾನಂದ್, ಸರ್ ಚೋಟೂರಾಮು ಮೊದಲಾದವರು ಬರುವ ನಿರೀಕ್ಷೆಯಿದೆ.

—೦೦—

ಕೊ ಡ ಗು

ತಾ. ೧೫-೯-೧೯೪೪ನೇ ಶುಕ್ರವಾರ

ಫಿಲಿಪ್ಸರ ಸ್ಪಷ್ಟ ನುಡಿ.

ಇಡೀ ಜಗತ್ತಿನ ಜನಸಂಖ್ಯೆಯ ಐದರಲ್ಲೊಂದು ಭಾಗವಾಗಿರುವ ಭಾರತೀಯರಿಗೆ ಸ್ವಾತಂತ್ರ್ಯವಿಲ್ಲ. ಭರತಖಂಡದ ಸ್ವಾತಂತ್ರ್ಯ ಪ್ರಶ್ನೆಯು ಇಡೀ ಜಗತ್ತಿನ ಸಮಸ್ಯೆ. ಈ ಅಖಂಡ ರಾಷ್ಟ್ರಕ್ಕೆ ಸ್ವಾತಂತ್ರ್ಯವಿಲ್ಲನೆಂದರೆ ಇಡೀ ಜಗತ್ತಿಗೆ ಸ್ವಾತಂತ್ರ್ಯವಿಲ್ಲ; ಮಾನವಲೋಕಕ್ಕೆ ಸುಖವಿಲ್ಲ. ನಲುವತ್ತು ಕೋಟಿ ಭಾರತೀಯರು ಗುಲಾಮರಾಗಿರುವಾಗ ಜಗತ್ತಿನ ಸ್ವಾತಂತ್ರ್ಯಕ್ಕೆ ಬೆಲೆಯೇನುಂಟು? ಕಳೆದ ಮಹಾಯುದ್ಧದ ಕಾಲಕ್ಕೆ ಭಾರತೀಯರು ನಾನಾರೀತಿಯಿಂದ ಬ್ರಿಟಿಷರಿಗೆ ಸಹಾಯವನ್ನೀಡಿದರು. 'ಯುದ್ಧದಲ್ಲಿ ಸಹಾಯಮಾಡಿರಿ; ನಿಮಗೆ ಸ್ವಾತಂತ್ರ್ಯ ಕೊಡುತ್ತೇವೆ; ನಿಮ್ಮ ತಲೆಯ ಮೇಲೆ ರಾಜಕಿರೀಟವಿಡುತ್ತೇವೆ' ಎಂದು ಬ್ರಿಟಿಷರು ಅಂದರು. ಧಾರ್ಮಿಕ ಭಾರತವು ಈ ಮಾತಿಗೆ ಬೆಲೆಕೊಟ್ಟು ಅಸಾಧ್ಯತ್ಯಾಗವೂಡಿ, ಅನುಪಮ ಜೀವ ತತ್ತು ವಿಜಯವನ್ನು ಗಳಿಸಲು ಸಹಾಯಕರಾದರು. ಬ್ರಿಟಿಷರು ಮುಕ್ತ ಕಂಠದಿಂದ ಭಾರತೀಯರು ಸಹಾಯವನ್ನು ಪ್ರಶಂಶಿಸಿದರು. ಆದರೆ ಭಾರತೀಯರಿಗೆ ದೊರೆತುದೇನು? ಗುಲಾಮ ಭಾರತವು ಇನ್ನಷ್ಟು ಗುಲಾಮಗಿರಿಯಲ್ಲಿ ಬೀಳಬೇಕಾಯಿತು. ಅಸಹನೀಯ ಅವಮಾನಗಳನ್ನು ಅನುಭವಿಸಬೇಕಾಯಿತು.

ಆದರೆ ಪುನಹ ಮತ್ತೊಂದು ಯುದ್ಧ ಪ್ರಾರಂಭವಾಗಿ ಬ್ರಿಟಿಷರು ಯಥಾವಿಧಿ ಹಿಂದೀಯರ ಸಹಾಯ ಕೋರಿದ್ದಾರೆ. ಮನಸ್ಸಿಲ್ಲದ ಹಿಂದೀಯರ ಮೇಲೆ ಒತ್ತಾಯದ ಪ್ರಭಾವ ಬೀರಿ ಸಹಾಯಪಡೆಯುತ್ತಿದ್ದಾರೆ. ಆದರೆ ಈ ಸಾರಿ ಬ್ರಿಟಿಷರ ಹಿಡಿತ ಇನ್ನಷ್ಟು ಬಿಗಿಯಾಗಿರುವದು ಕಂಡುಬರುತ್ತದೆ. ಕಳೆದ ಯುದ್ಧದ ಕಾಲಕ್ಕೆ ಹಿಂದೂದೇಶಕ್ಕೆ ಸ್ವಾತಂತ್ರ್ಯ ಕೊಡುವೆನೆಂಬುವ ಕೋರಿಕೆಯ ಭರವಸೆಯನ್ನಾದರೂ ಇತ್ತಿದ್ದರು. ಆದರೆ ಈ ಸಾರಿ, ಯುದ್ಧಾನಂತರ ಭಾರತವು ಸ್ವತಂತ್ರವಾಗುವದೆಂದರೂ ನಿರ್ದಿಷ್ಟವಾದ ಯಾವ ಭರವಸೆಯನ್ನೂ ಕೊಡಲು ಅವರು ಮುಂದೆ ಬಂದಿರುವದಿಲ್ಲ. ಬದಲು ಭಾರತದ ಬಗ್ಗೆ ಸಹಾನುಭೂತಿ ತೋರಿಸುವ ರಾಷ್ಟ್ರಗಳನ್ನು ಗೆದರಿಸಿ ಮೂಲೆಯಲ್ಲಿ ಕೂರಿಸುವ ಪ್ರಯತ್ನ ಮಾಡಿದೆ.

ಭಾರತದ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಅವಶ್ಯಕಾದ ಪ್ರೆಸಿಡೆಂಟ್ ರೂಸ್‌ವೆಲ್ಟರ ಪ್ರತಿನಿಧಿಯಾಗಿ ಭಾರತಕ್ಕೆ ಬಂದಿದ್ದ ವಿಲಿಯಂ ಫಿಲಿಪ್ಸರು ಇಲ್ಲಿಯ ಸ್ಥಿತಿಯವಲೋಕನ ಮಾಡಿ ಒಪ್ಪಿಸಿ ವರದಿಯು ಬ್ರಿಟಿಷರ ಕಣ್ಣನ್ನು ಕೆಂಪಗೆ ಮಾಡಿದೆ. ಫಿಲಿಪ್ಸರು ತಮ್ಮ ರವದಿಯಲ್ಲಿ ಕಾಂಗ್ರೆಸಿನವರು ಕೇಳುತ್ತಿದ್ದ ವಿಷಯಗಳನ್ನೇ ಸಾರಿದ್ದಾರೆ. ಹಿಂದೂಸ್ಥಾನದಲ್ಲಿ ನಡೆಯುತ್ತಿರುವ ಬ್ರಿಟಿಷರ ಧೋರಣೆಯು ಸ್ವಾರ್ಥಪರವಾದುದು. ಯುದ್ಧದ ಪ್ರಾಮುಖ್ಯ ಧ್ಯೇಯವೆನ್ನುವ ಪ್ರಜಾ ಪ್ರಭುತ್ವ ತತ್ವದ ಸಮೂಧಿ ಹಿಂದೂದೇಶದಲ್ಲಾಗಿದೆಯೆಂದಿದ್ದಾರೆ. ಹಿಂದೂಸ್ಥಾನದ ಜನತೆಯಲ್ಲಿ ವಿಶ್ವಾಸವನ್ನು ಹುಟ್ಟಿಸಲು ಬ್ರಿಟಿಷರು ತಮ್ಮ ನೀತಿಯನ್ನು ಬದಲುಗೊಳಿಸಿ ಇಂತಿಷ್ಟು ಅವಧಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡಲಾಗುವದೆಂದು ಸಾರುವದಲ್ಲದೆ ಈ ಘೋಷಣೆಯು ಯಥಾರ್ಥ ಸದುದ್ದೇಶಗಳಿಂದ ಕೂಡಿದ್ದೆಂಬುದನ್ನು ಸೂಚಿಸಲು ಕೂಡಲೇ ತಾತ್ಕಾಲಿಕವಾದ ಪ್ರಾತಿನಿಧಿಕ ಸರಕಾರವನ್ನು ಸ್ಥಾಪಿಸಬೇಕೆಂದು ಫಿಲಿಪ್ಸರು ಸಾರಿದ್ದಾರೆ. 'ಕಂಡದ್ದು ಹೇಳಿದರೆ ಕೆಂಡದಂಥಾ ಕೋಪ'ವೆಂಬ ನಾಣ್ನುಡಿಯಂತೆ ಬ್ರಿಟಿಷರು ಕುಪಿತರಾಗಿದ್ದಾರೆ. ಭಾರತದ ವಿಷಯದಲ್ಲಿ ಯಾರೂ ಕೈಹಾಕಬೇಕಾದ ಆಗತ್ಯವಿಲ್ಲವೆಂದು ಎಲ್ಲರ ಬಾಯಿಮುಚ್ಚಿಸಿದ್ದಾರೆ.

ಹಿಂದೂದೇಶದ ಮೇಲೆ ಸಹಾನುಭೂತಿ ತೋರಿಸುವವರನ್ನು ಗದರಿಸುವ ಕಾಲ ಕಳೆಯುತ್ತಾ ಬಂದಿದೆ. ಹಿಂದೂದೇಶದ ಸಮಸ್ಯೆಯು ಸರ್ವತೋಮುಖ ಸಮಸ್ಯೆಯಾಗಿದೆ. ಜರ್ಮನಿಯು ಹತಾಶವಾಗಿ ಹಿಂಡೆಗೆಯುತ್ತಿದೆ ಸಹಜ. ಆದರೂ ಜಪಾನರನ್ನು ಸೆಲ್ಲಬೇಕಿದೆ. ಜಪಾನರ ಯುದ್ಧದಲ್ಲಿ ಹಿಂದೂಸ್ಥಾನದ ಮತ್ತು ಏಷ್ಯಾದ ಸಹಾಯವು ಬ್ರಿಟಿಷರಿಗೆ ಅತ್ಯಗತ್ಯ. ಆದ್ದರಿಂದ ಫಿಲಿಪ್ಸರ ಸ್ಪಷ್ಟವಾಣಿಯನ್ನು ಗೌರವಿಸಿ ಹಿಂದೂಸ್ಥಾನದ ಹೃತ್ಪೂರ್ವಕ ಬೆಂಬಲವನ್ನು ಪಡೆಯಲು ಮತ್ತು ತಮ್ಮ ಕೀರ್ತಿಯನ್ನು ಉಳಿಸಲು ಬ್ರಿಟಿಷರು ಮುಂದೆ ಬರಬೇಕು.

ಒಳದೇಶ.

ಕೊಡಗು ಕಿತ್ತಳೆ ವ್ಯವಸಾಯಗಾರರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಅಕ್ಟೋಬರ್ ತಾ. 6ರಲ್ಲಿ ವೀರಾಜಪೇಟೆಯಲ್ಲಿ ಕೊಡಗು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ಚೀಫ್ ಕಮಿಷನರು ತಾ. 15ರಲ್ಲಿ ನಾಪೋಕ್ಲಿಗೆ ಹೋಗಿ ತಾ. 16 ಮತ್ತು 17ರಲ್ಲಿ ವೀರಾಜಪೇಟೆಯಲ್ಲಿದ್ದು ಮತ್ತು ತಾ. 18ರಲ್ಲಿ ಪೊನ್ನಂಪೇಟೆಗೆ ಹೋಗಿ ವಾಪಸು ಮಡಿಕೇರಿಗೆ ಬರುವರೆಂದು ತಿಳಿಯಬಂದಿದೆ.

ಮಿಸ್ ಕೋದಾಂಡೆ ಸೀತಾನಂಜಪ್ಪ ಬಿ. ಎ. ಯವರು ಇಂಗ್ಲೆಂಡಿನಲ್ಲಿ ಹೆಚ್ಚಿನ ನಂಬರುಗಳನ್ನು ಪಡೆದುದಕ್ಕೆ ಮದ್ರಾಸಿನ ಗವರ್ನರರ ಅಧ್ಯಕ್ಷತೆಯಲ್ಲಿ ನಡೆದ ಪಧವಿಧಾನ ಸಮಾರಂಭೋತ್ಸವದಲ್ಲಿ ಕೊರವಂಡ ಅಪ್ಪಯ್ಯ ದೇವಯ್ಯ ವಿದ್ಯಾರ್ಥಿವೇತನ ನಿಧಿಯಿಂದ ಕೊಡಲ್ಪಟ್ಟ ಬಹುಮಾನವು ಅವರಿಗೆ ದೊರೆತಿದೆ.

ವೀರಾಜಪೇಟೆ ವಿದ್ಯಾರ್ಥಿನಿ ಭವನಕ್ಕೆ ಒಬ್ಬಳು 'ಡೆಪ್ಯುಟಿ' ವಾರ್ಡರಳು ಬೇಕಾಗಿದ್ದಾಳೆಂದೂ, ಅಪೇಕ್ಷೆಯುಳ್ಳವರು ಈ ತಿಂಗಳ ಅಂತ್ಯದೊಳಗೆ ಅರ್ಜಿ ಬರಕೊಳ್ಳಬಹುದೆಂದೂ, ಹೆಚ್ಚಿನ ಮಾಹಿತಿಯನ್ನು ಬರೆದು ತಿಳಿದುಕೊಳ್ಳಬಹುದೆಂದೂ ತಿಳಿಯಬಂದಿದೆ.

ಆಪಿಲ ಕೊಡವ ಸಮಾಜದ ಕೇಂದ್ರ ಸಮಿತಿಯ ಮೊಟಂಗು ಅಧ್ಯಕ್ಷರಾದ ಶ್ರೀ ಮೂತಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲಿ ನಡೆದು ಹಿಂದೂ ಲಾ ಸಮಿತಿಯವರು ಕಳುಹಿಸಿದ ಕರಡು ಮಸೂದೆಯನ್ನು ಅಜಮಾಯಿಸಿ ವಿಮರ್ಶಿಸಲು ದ. ಮತ್ತು ಉ. ಕೊಡಗುಗಳಿಗೆ ಒಂದೊಂದರಂತೆ ಉಪಸಮಿತಿಗಳನ್ನು ನೇಮಿಸಿರುವದಲ್ಲದೆ, ಕೊಡಗು ದೇಶದಲ್ಲಿ ಧನಗಳ ರೋಗ, ಆಳುಗಳ ತೊಂದರೆ ಮೊದಲಾದ ಅಡಚಣೆಗಳಿಂದ ರೈತರಿಗೆ ತೊಂದರೆಯೂಗಿ ಬೆಳೆಯು ಕಡಿಮೆಯೂಗುವ ಸಂದರ್ಭವಿರುವದರಿಂದ ಬತ್ತದ ಬೆಲೆಯನ್ನು ಗಾಡಿಗೆ ರೂ. 150 ಕಡಿಮೆಯಿಲ್ಲದೆ ಏರಿಸಬೇಕೆಂಬ ಗೊತ್ತುವಳಿಯನ್ನೂ ಮಾಡಲಾಯಿತು.

ಯುದ್ಧದ ಏದನೆ ವರ್ಷದ ಉತ್ಸವವನ್ನು ಚೀಫ್ ಕಮಿಶನರವರೆರ ಅಧ್ಯಕ್ಷತೆಯಲ್ಲಿ ತಾ. 11-9-44ರಲ್ಲಿ ಮಡಿಕೇರಿಯಲ್ಲಿ ಆಚರಿಸಲಾಯಿತು. ಆ ಸಮಯಕ್ಕೆ ಸರಿಯಾಗಿ ಮಡಿಕೇರಿ ಹೈಸ್ಕೂಲಿನ ಬಾಲಕರು ಪೇಟೆಯಲ್ಲಿ ಬೀದಿ ಬೀದಿಗಳಲ್ಲಿ ರಾಷ್ಟ್ರಗೀತೆಗಳನ್ನು ಹಾಡುತ್ತಾ, ಗಾಂಧಿ-ಜಿನ್ನಾ ಭೇಟಿ ಯಶಸ್ವಿಯಾಗಲೆಂದು ಹಾರೈಸುತ್ತಾ ಶಿಸ್ತಿನಿಂದ ಮೆರವಣಿಗೆ ಹೊರಟು ರಾಷ್ಟ್ರೀಯ ದಿನವನ್ನಾಚರಿಸಿದರು.

ರೆಸಿಡೆಂಟ್ ಮೆಡಿಕಲ್ ಆಫೀಸರಾಗಿದ್ದ ಶ್ರೀ ಕೋದಾಂಡ ಮೇದಪ್ಪನವರನ್ನು ಅಸಿಸ್ಟೆಂಟ್ ಸರ್ಜನರಾಗಿ ನೇಮಿಸಲಾಗಿದೆ.

ಮಡಿಕೇರಿಯಲ್ಲಿ ಪ್ಲೇಗು ದಿನೆ ದಿನೇ ಹೆಚ್ಚಾಗುತ್ತಿದೆ. ಈ ವಾರ ನಾಲ್ಕು ಜನರಿಗೆ ಹೊಸದಾಗಿ ಅಂಟಿದೆ. ಇದರೊಂದಿಗೆ ಮಹದೇವಪೇಟೆಯಲ್ಲಿ ಸಿಡುಬೂ ಪ್ರಾರಂಭವಾಗಿರುವದಾಗಿ ತಿಳಿಯಬಂದಿದೆ.

ಬರುವ ಅಕ್ಟೋಬರ್ ತಾ. 16ನೇ ಸೋಮವಾರ ರಾತ್ರೆ 2 ಗಂಟೆ 10 ನಿಮಿಟಿಗೆ ತುಲಕಾವೇರಿ ಸಂಕ್ರಮಣ ತೀರ್ಥೋದ್ಭವವಾಗುವದೆಂದು ತಿಳಿಯಬಂದಿದೆ.

ಕಾನ್ಪುರದಲ್ಲಿರುವ ಕೊಡವ ಸಂಘದವರು ಕೈಲುಮುಹೂರ್ತ ಹಬ್ಬವನ್ನು ತಾ. 3-9-44 ರಲ್ಲಿ ಆಚರಿಸಿದರೆಂದೂ, ಆ ಸಂದರ್ಭದಲ್ಲಿ ಆಟೋಟಗಳ ಸ್ಪರ್ಧೆಯನ್ನು ಏರ್ಪಡಿಸಿ ಜಯಶೀಲರಾದವರಿಗೆ ಬಹುಮಾನಗಳನ್ನೂ ಹಂಚಿದರೆಂದೂ ತಿಳಿಯಬರುತ್ತದೆ.

ಬರುವ ಅಕ್ಟೋಬರ್ ತಾರೀಕು 2 ರಲ್ಲಿ ಆಗುವ ಮಹಾತ್ಮ ಗಾಂಧಿಯವರ 75 ನೇ ಹುಟ್ಟು ಹಬ್ಬದ ಉತ್ಸವದ ಸಂದರ್ಭದಲ್ಲಿ ವೀರಾಜಪೇಟೆ ಮಹಿಳಾಸಮಾಜ ಮಂದಿರದಲ್ಲಿ ಹಿಂದಿ, ನೂಲುವದು, ಸಂಗೀತ ಮೊದಲಾದ ವುಗಳ ಸ್ಪರ್ಧೆಯೊಂದನ್ನು ಏರ್ಪಡಿಸಿ ಬಹುಮಾನ ಹಂಚುವ ಏರ್ಪಾಡು ಮಾಡುವರಾಗಿ ತಿಳಿಯಬಂದಿದೆ.

ಕಸ್ತೂರ್ ಬಾ ಸ್ಮಾರಕ ನಿಧಿಯ ಸಹಾಯಾರ್ಥವಾಗಿ ತಾ. 16-9-44 ನೇ ಶನಿವಾರ ಸಾಯಂಕಾಲ 5 ಗಂಟೆಗೆ ಕೊಡಗು ಜವಿನ್ದಾರರ ಸಂಘದ ಹಾಲ್‌ನಲ್ಲಿ 'ಕಂಗ್ರೆಸ್ಟಾರ್' ಶ್ರೀ ಚೆಕ್ಕೆರ ಅಪ್ಪಯ್ಯನವರ ಸಂಗೀತವೂ, ಹರಿಕಥಾ ಶ್ರೇಷ್ಠ ಶ್ರೀ. ಬಿ. ಕೆ. ಗೋಪಾಲದಾಸರ ಹರಿಕಥೆಯೂ ನಡೆಯವದು. ಟಿಕೇಟು ರೂ. ಒಂದು ಎಂದು ಇಡಲಾಗಿದೆ. ಸರ್ವರೂ ಬಂದು ಪ್ರೋತ್ಸಾಹಿಸಿ ನಿಧಿಗೆ ಸಹಾಯಮಾಡಲು ಸಂದರ್ಭವಿದೆ.

ಸಾರ್ವಜನಿಕ ಸಭೆಗಳು.

ರೈತರ ಜೀವನದ ಖರ್ಚೂ, ವ್ಯವಸಾಯದ ವೆಚ್ಚವೂ ಈವರ್ಷ ವಿಪರೀತ ಏರಿರುವುದರಿಂದಲೂ, ಮಳೆಯು ಅಭಾವದಿಂದ ಬೆಳೆ ಕಡಿಮೆಯಾಗಿರುವುದರಿಂದಲೂ ಬತ್ತದ ಬೆಲೆಯನ್ನು ಗಾಡಿಗೆ ರೂ. 150ಕ್ಕಾದರೂ ಏರಿಸಬೇಕೆಂದು ಈ ತಾ. 5ರಲ್ಲಿ ಶ್ರೀ ಎಸ್. ಎನ್. ರಾವುಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಫ್ರೇಜರ್‌ಪೇಟೆಯಲ್ಲಿ ನಡೆದ ಸಾರ್ವಜನಿಕ ಮೀಟಿಂಗಿನಲ್ಲಿ ತೀರ್ಮಾನಿಸಿ, ಶ್ರೀ ರಾವುಶೆಟ್ಟರನ್ನು ಸರಕಾರಕ್ಕೆ ಈ ಬಗ್ಗೆ ಡೆಪ್ಯುಟೇಶನ್ ಹೋಗಲು ಪ್ರತಿನಿಧಿಯಾಗಿ ಆರಿಸಲಾಯಿತು. ಹಾಗೆಯೇ ತಾ. 10ರಲ್ಲಿ ಗೋಣಿಕೊಪ್ಪಲಲ್ಲಿ ಶ್ರೀ ಪಿ. ಪಿ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಕೊಳ್ಳಿಮಾಡ ಕರುಂಬಯ್ಯನವರನ್ನೂ, ತಾ. 11ರಲ್ಲಿ ಹುದಿಕೇರಿಯಲ್ಲಿ ಶ್ರೀ ಕಾಡ್ಯಮಾಡ ಐಯ್ಯಮ್ಮನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಶ್ರೀ ಕಾಕಮಾಡ ಗಣಪತಿಯವರನ್ನೂ, ತಾ. 13ರಲ್ಲಿ ವೀರಾಜಪೇಟೆಯಲ್ಲಿ ಶ್ರೀ ಬಿದ್ದಂಡ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶ್ರೀ ಕೋಳೆರ ಕರುಂಬಯ್ಯನವರನ್ನೂ ಮತ್ತು ತಾ. 14ರಲ್ಲಿ ಮೂರ್ನಾಡಿನಲ್ಲಿ ಶ್ರೀ ಪಾಂಡಂಡ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಶ್ರೀ ಪಾಂಡಂಡ ಮುದ್ದಪ್ಪನವರನ್ನೂ ಪ್ರತಿನಿಧಿಗಳಾಗಿ ಆರಿಸಲಾಯಿತು.

—೦೨—

ರಣಭೇರಿ.

ಯುದ್ಧದ ವಿಚಾರವಾಗಿ ಪ್ರಕಟವಾಗುತ್ತಿರುವ ಯಾವ ವರದಿಯನ್ನೇ ನೋಡಲಿ; ಯಾವ ರೇಡಿಯೋವನ್ನೇ ಕೇಳಲಿ ಮಿತ್ರರ ಮುನ್ನಡೆಯ ವಿಚಾರವಲ್ಲದೆ ಬೇರೆಲ್ಲ. ಸಾರ್ವತ್ರಿಕವಾದ ರಣರಂಗಗಳಲ್ಲಿ ಸರ್ವತೋಮುಖವಾದ ಮಿತ್ರರ ಮುನ್ನಡೆಯು ಕೇಳಿಬರುತ್ತಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ವಾರ್ತೆಗಳಾಗಲೀ, ರೇಡಿಯೋ ಮೂಲಕ ಬರುವ ವಾರ್ತೆಗಳಾಗಲೀ ಏಕ ಮುಖವಾದ ವಾರ್ತೆಗಳು ಎಂದು ಹೇಳುವವರಿದ್ದಾರೆ. ಕೇವಲ ಮಿತ್ರಪಕ್ಷದ ವಾರ್ತೆಗಳ ವಿನಹ ಬೇರೆ ವರ್ತಮಾನಗಳು ದೊರೆಯಲಾರವು ಎನ್ನುವವರೂ ಇದ್ದಾರೆ. ಮಿತ್ರರು ಊದಿದ್ದೇ ಶಂಕ, ಅದನ್ನು ಅಲ್ಲವೆನ್ನಲು ಅವರೊಳಗಿರುವವರಿಗೆ ಎಲ್ಲಿಂದ ಸಾಧ್ಯ ಎನ್ನುವವರೂ ಇದ್ದಾರೆ. ಈಗ ಪ್ರಚಾರವಾಗುತ್ತಿರುವ ವಾರ್ತೆಗಳೆಲ್ಲಾ ನಿಜವೇ? ಬಲಾಢ್ಯವೆಂದೆನಿಸಿದ್ದ ಜರ್ಮನಿಯು ಇಷ್ಟು ಸುಲಭದಲ್ಲಿ ಸೋಲನ್ನು ಒಪ್ಪಿಕೊಳ್ಳುತ್ತಿರುವದೇ ಎಂದು ಶಂಕಿಸುವವರೂ ಇದ್ದಾರೆ. ಮಿತ್ರರು ತಮ್ಮ ಜಯಗಳನ್ನು ದೊಡ್ಡದು ಮಾಡಿ ಪ್ರಚಾರ ಮಾಡುತ್ತಿರುವರೆಂದು ಊಹಿಸಿಕೊಂಡರೂ ಈ ಕಳೆದ ಕೆಲವು ದಿನಗಳ ಘಟನೆಗಳು ಮಿತ್ರರಿಗೆ ನಿಶ್ಚಯವಾಗಿಯೂ ಜಯದೊರೆಯುತ್ತಿವೆಯೆಂಬುದನ್ನು ಸಿದ್ಧಪಡಿಸುತ್ತಿವೆ. ಮಿತ್ರರು ಪ್ರಚಾರ ಮಾಡುತ್ತಿರುವ ವಾರ್ತೆಗಳನ್ನು ನಿರಾಕರಿಸಿದರೂ ಫ್ರಾನ್ಸಿನಲ್ಲಿ ಯುದ್ಧ ನಡೆಯುತ್ತಿದೆಯೆಂಬುದನ್ನು ನಿರಾಕರಿಸಲಾಗುತ್ತದೆಯೇ? ರಷ್ಯಾದವರು ಪ್ರಶ್ಯಾದ ವರೆಗೆ ಬಂದಿರುವರೆಂಬುದನ್ನು ಅಲ್ಲಗಳೆಯಲಾಗುತ್ತದೆಯೇ? ಇವುಗಳನ್ನು ಅಲ್ಲಗಳೆಯಲಾಗುವದೆಂದ ಮೇಲೆ ಜರ್ಮನರ ಸ್ಥಿತಿಯು ಶೋಚನೀಯವಾಗುತ್ತಾ ಬರುತ್ತಿದೆಯೆಂಬುದನ್ನು ಒಪ್ಪಲೇಬೇಕಾಗುವದು.

ಜರ್ಮನರು ಯಾಕೆ ಈ ರೀತಿ ಹಿಂದೆ ನಡೆಯುತ್ತಾರೆ. ಯಾವ ಕಡೆಯಲ್ಲೂ ಪ್ರತಿಭಟಿಸದೆ ಹಿಂತೆಗೆದುಕೊಳ್ಳುವದರ ಗೂಢವೇನು? ಎಂಬುದು ಬಿಡಿಸಲಾರದ ಸಮಸ್ಯೆಯಾಗಿದೆ. ಶತ್ರುವನ್ನು ಎದುರಿಸಲಾರದಷ್ಟು ಜರ್ಮನಿಯು ಶಕ್ತಿಯನ್ನು ಕಳೆದುಕೊಂಡಿದೆಯೆಂದರೆ ವಾಚಕರೇ ನಂಬಲಿಕ್ಕಿಲ್ಲ. ಯಾಕೆಂದರೆ ಇಡೀ ಜಗತ್ತನ್ನು ಶಲ್ಲಣಗೊಳಿಸಿದ ಜರ್ಮನಿಯ ಧೀರತನದ ಮುದ್ರೆಯು ವಾಚಕರ ಸ್ಮೃತಿಯಿಂದ ಇನ್ನೂ ಮಾಯವಾಗಿರುವದಿಲ್ಲ. ಇರಲಿ, ಹೇಗೂ ಜರ್ಮನರಿಗೆ ಗಂಡಾಂತರದ ದಿನಗಳು ಸನ್ನಿಹಿತವಾಗುತ್ತಿವೆ.

ಫ್ರಾನ್ಸಿನ ಯುದ್ಧವನ್ನು ಪರಿಶೀಲಿಸಿದರೆ ಅದರಲ್ಲಿ ಮೂರು ಮುಖ್ಯ ಭಾಗಗಳನ್ನು ಕಾಣಬಹುದು. ಪ್ರಥಮವಾಗಿ ಫ್ರಾನ್ಸಿನೊಳಗೆ ನುಗ್ಗಿ ಅನೇರಿಕನರೊಡಗೂಡಿ ಶೆರ್ಬರ್ಗ್ ಮೊದಲಾಯಿನನ್ನು ವಶಪಡಿಸಿಕೊಂಡ ಪರ್ವಕಾಲ. ನಂತರ ಕೇಯನ್, ಸೆಂಟ್ ಲೋ, ಮೊದಲಾದುವನ್ನು ಪಶಪಡಿಸಿರೋನೆಲ್ಲನ ಸೈನ್ಯಗಳನ್ನು ಹಿಮ್ಮೆಟ್ಟಿಸಿದ ಪುರಂತೆಕಾಲ. ಸೂಪನೆಯ ದಾಗಿ ಬ್ರೆಸ್ಟ್ ದ್ವೀಪಕಲ್ಪವನ್ನು ವಶಪಡಿಸಿ ಸಾರ್ತೆಕಣಿವೆಗಾಗಿ ಮುಂದರಿದು ಜರ್ಮನ್ ಗಡಿಗೆ ಸಾಗತೊಡಗಿದ್ದು. ಈ ಮೂರು ಪರ್ವಗಳನ್ನು ದಾಟಿ ಈಗ ಮಿತ್ರ ಸೇನೆಯು ಜರ್ಮನರ ಎಳನೆ ದಳವನ್ನು ಸುತ್ತುಗಟ್ಟಿ ಹಿಮ್ಮೆಟ್ಟಿಸಿ ವಿಜಯ ಪತಾಕೆ ಹಿಡಿದು ಮುನ್ನಡೆಯುತ್ತಿದ್ದಾರೆ. ನಾರ್ಮಂಡಿ ಕದನ ಒಂದರಲ್ಲಿ 400000 ಜರ್ಮನರು ಹತರಾದರಂತೆ. ಯುದ್ಧದ ಇಂದಿನ ನಿಜವಾದ ಸ್ಥಿತಿ ಹೇಗಿದೆ? ಇಡೀ ಮಿತ್ರಸೇನೆಯ ಮಹಾಪ್ರವಾಹವು ದಾರಿಯಲ್ಲಿ ಸಿಕ್ಕಿದ್ದೆಲ್ಲವನ್ನೂ ಕೊಚ್ಚಿಕೊಂಡು ಜರ್ಮನಿಯ ಕಡೆ ಹರಿಯುತ್ತಿದೆ. ಈಗಾಗಲೇ ಮಿತ್ರರು ಜರ್ಮನಿಯೊಳಗನುಗ್ಗಿ ಐದು ವೈಲುಗಳಷ್ಟು ಮುಂದರಿದಿದ್ದಾರೆ. ಜರ್ಮನರ ಮಹಾಗೋಡೆ ಸೀಜ್‌ಫ್ರೈಡ್ ಲೈನು ಈ ಪ್ರವಾಹವನ್ನು ತಡೆಯುವಂತೆ ಕಂಡು ಬರುವದಿಲ್ಲ. 60 ಲಕ್ಷ ಟನ್ ಸೀಮೆಂಟಿನಿಂದ ನಿರ್ಮಿಸಲ್ಪಟ್ಟ ಈ ಗೋಡೆಯನ್ನು ಒಂದು ಮೂರ್ಗವಾಗಿ ಮಿತ್ರರು ಬೇಧಿಸಿ ಒಳನುಗ್ಗಿದ್ದಾರೆ. ಈ ವ್ಯೂಹದಲ್ಲಿ 17,000 ಸುಸಜ್ಜಿತ ಕಾಂಕ್ರೀಟಿನ ಕೋಟೆಗಳಿವೆ. ಈ ಗೋಡೆಯನ್ನು ಕಟ್ಟಲು ಜರ್ಮನರು 1936 ರಲ್ಲಿ ಪ್ರಾರಂಭಿಸಿ 1938 ರಲ್ಲಿ ಪೂರೈಸಿದರು. ಈ ಲೈನಿನಲ್ಲಿ ಕೋಟೆಯೊಳಗೆ ಕೋಟೆ, ಕೋಟೆಯ ಹಿಂದೆ ಮತ್ತೊಂದು ಕೋಟೆ, ಅದರ ಹಿಂದೆ ಮತ್ತೊಂದು ಕೋಟೆ ಈ ರೀತಿ ಅನೇಕ ಪ್ರಾಕಾರಗಳಿಂದ ಕೂಡಿದೆ. ಈ ಕೋಟೆಯು 30 ವೈಲುಗಳ ಆಗಲವಾಗಿದೆ. ಗುಪ್ತರೀತಿಯ ಕೋಟೆಕೊತ್ತಲ, ಜೇಡರ ಬಲೆಯಂತೆ ಹರಡಿರುವ ಸುರಂಗಮಾರ್ಗಗಳು ನೂರಾರು ಆಡಿ ಆಳವಾಗಿ ರೂಡಿಸಲ್ಪಟ್ಟಿರುವ ಕಾಂಕ್ರೀಟ್ ಆಡ್ಡಗೋಡೆಗಳು ಸೀಜ್‌ಫ್ರೈಡ್ ಗೋಡೆಯನ್ನು ದುರ್ಗಮವ್ಯೂಹವನ್ನಾಗಿ ಮಾಡಿವೆ. ಇಂಥಾ ಗೋಡೆಯನ್ನು ಮಿತ್ರಪ್ರವಾಹದ ಮುಂದೆ ಬಿರುಕು ಬಿಟ್ಟ ವಾರ್ತೆ ಬಂದಿದೆ.

ಮಿತ್ರರ ಸೇನೆಗಳು ಈ ರೀತಿ ಮುಂದರಿಯುತ್ತಿರಲು ಇಂಗ್ಲೆಂಡಿನ ಮೇಲೆ ಜರ್ಮನರ ಪ್ರೇತವಿಮಾನಗಳ ಮತ್ತು ಕರಾವಳಿಯ ತೋಪುಗಳ ಧಾಳಿ ನಡೆದೇ ಇದೆ. ಇದನ್ನು ನಿಲ್ಲಿಸಲು ಮಿತ್ರರ ಸೇನೆಯೊಂದು ಜನರಲ್ ಡೆಂಪ್ಸೆಯವರ ನಾಯಕತ್ವದಲ್ಲಿ ಫ್ರಾನ್ಸ್ ಕರಾವಳಿಗಾಗಿ ಸಾಗುತ್ತಿದೆ. ಕರಾವಳಿಯ ಮುಖ್ಯ ಬಂದರು, ಪಟ್ಟಣಗಳೆಲ್ಲವೂ ಜರ್ಮನರ ವಶದಲ್ಲಿಯೇ ಇವೆ. ಇವುಗಳನ್ನು ವಶಪಡಿಸಿಕೊಂಡರೆ ಇಂಗ್ಲೆಂಡಿನ ಮೇಲಿನ ಜರ್ಮನ್ ಪ್ರೇತವಿಮಾನಧಾಳಿಯನ್ನು ನಿಂತೀತೆಂದು ಮಿತ್ರರ ಅಭಿಮತ.

ಈ ನುಚ್ಚೆ ರಷ್ಯನರು ಪೂರ್ವ ಪ್ರಶ್ಯಾಕ್ಕೆ ನುಗ್ಗಿದರು. ಇತ್ತ ಪೋಲೆಂಡಿನಲ್ಲಿ ವಾರ್ಸಾವನ್ನು ವಶಪಡಿಸಿದರು ಎಂಬ ವಾರ್ತೆಗಳು ಬಂದು ಎರಡು ವಾರಗಳಾದವು. ರಷ್ಯನರು ಅಲ್ಲಿಂದ ಮುಂದೆ ಬಂದಂತೆ ಕಂಡುಬರುವದಿಲ್ಲ. ಜರ್ಮನರ ಪ್ರತಿಭಟನೆ ಜೋರಾಗಿ ಮುನ್ನಡೆಯು ನಿಂತಿರುವದೋ ಯಾವುದೇ ಯಾವುದಾದರೂ ಕಾರಣದಿಂದಲೋ ಎಂಬುದು ತಿಳಿದುಬಂದಿರುವದಿಲ್ಲ. ಹೇಗೂ ಯೂರೋಪಿನ ಯುದ್ಧ ಜನರಲ್ ಈಶನ್ ಹೋವರರಂತೆ 1944 ರ ಅಂತ್ಯದಲ್ಲಿ ಮುಗಿದೀತೆ ಎಂಬುದನ್ನು ಪರ್ಯಾಲೋಚಿಸಿದರೆ ಈಗ ಅದಕ್ಕೆ ಉತ್ತರ ಹೇಳಲು ಸಾಧ್ಯವಾಗಲಾರದು. ಮಿತ್ರರು ಜರ್ಮನಿಯೊಳಗೆ ನುಗ್ಗಿ ಒಂದು ವಾರವಾಗಬೇಕು. ಜರ್ಮನರು ಯಾವ ರೀತಿ ಪ್ರತಿಭಟಿಸುವರೆಂಬುದನ್ನು ನೋಡಿದರೆ ಗೊತ್ತಾಗುವದು. ಯೂರೋಪಿನ ಯುದ್ಧದ ಕಡೇ ಅಂಕವು ಬಂದಿತೆಂದು ಭಾರತೀಯರಾದ ನಾವು ಸಂತೋಷಪಡುವ ಕಾರಣವಿಲ್ಲ. ಯಾಕೆಂದರೆ ನಮಗೆ ಸಂಬಂಧಿಸಿದ ಯುದ್ಧವು ಇನ್ನು ಮುಂದಕ್ಕೆ ಪ್ರಾರಂಭವಾಗಲಿದೆ. ಜಪಾನರನ್ನು ಮುರಿಯುವ ಯುದ್ಧದಲ್ಲಿ ಭಾರತವು ನಾನಾರೀತಿಯ ಎಡರುತೊಡರುಗಳಿಗೆ ಈಡಾಗಿ ನಾನಾರೀತಿಯ ಕಷ್ಟಗಳನ್ನನುಭವಿಸಬೇಕಾಗಿ ಬರಬಹುದು. ಆದ್ದರಿಂದ ಪಶ್ಚಿಮದ ಯುದ್ಧ ಅಂತ್ಯವಾಗಿ ಹಿಟ್ಲರನ ಪತನವಾಯಿತೆಂದರೆ ಯುದ್ಧ ನಮ್ಮ ಭಾಗಕ್ಕೆ ಮುಗಿದೆಂತಾಗದು.

ಗಾಂಧಿ-ಜಿನ್ನಾ ಭೇಟಿ.

ಗಾಂಧಿ ಜಿನ್ನಾರವರ ಭೇಟಿಯು ಮುಂದರಿಯುತ್ತಾ ಇದೆ. ಈ ಭೇಟಿಯು ಇನ್ನೂ ಕೆಲವು ದಿನಗಳ ವರೆಗೆ ನಡೆಯಬಹುದೆಂದು ಅಂದಾಜುಮಾಡಲಾಗಿದೆ. ನಡೆದ ಮಾತುಕತೆಯ ವಿಚಾರವನ್ನು ಬಹು ಗೋಪ್ಯವಾಗಿಡಲಾಗಿದೆ. ಮಾತುಕತೆಯ ವಿವರವನ್ನು ಇಬ್ಬರೂ ಬರೆದು ಇಟ್ಟುಕೊಂಡಿರುವರಂತೆ. ಭೇಟಿಯಾಗಿ ಹೊರಬರುವಾಗಲಿರುವ ತಮ್ಮ ಮುಖಚರ್ಯೆಯ ಮೇಲೆ ಊಹಾಪೋಹಗಳನ್ನು ಮಾಡಿ ಸುಮ್ಮನೆ ವಿವಿಧ ವಿಚಾರಗಳನ್ನು ಪ್ರಕಟಿಸಬಾರದೆಂದು ಗಾಂಧೀಜಿಯವರು ಪತ್ರಿಕೋದ್ಯೋಗಿಗಳಿಗೆ ಎಚ್ಚರಿಸಿದ್ದಾರೆ. ತಾ. 13 ರ ದಿನದ ಭೇಟಿಯಲ್ಲಿ ಜಿನ್ನಾರವರಿ ಬಹುಭಾಗದ ಮಾತನ್ನಾಡಿದರಂತೆ. ಮಾತುಕತೆ ಎಷ್ಟು ದಿನಗಳ ವರೆಗೆ ನಡೆಯುವದೆಂದು ಸ್ಪಷ್ಟವಾಗಿ ಹೇಳಲು ಬರುವದಿಲ್ಲವೆಂದು ತಿಳಿದು ಬಂದಿದೆ.

ಈ ಮಾತುಕತೆಯು ಜಯಪ್ರದವಾದರೆ ಪ್ರಾಂತಗಳಲ್ಲಿ ಹೊಸ ಚುನಾವಣೆ ನಡೆದು, ಹೊಸ ನ್ಯಾಯಶಾಸನ ಸಭೆಗಳು ಮತ್ತು ಕೌನ್ಸಿಲುಗಳು ಕೆಲಸ ಮಾಡುವವೆಂದು ಊಹಿಸಲಾಗಿದೆ.

ವಾರ್ತೆಗಳು.

ದಿ. ಸಿ. ಎಫ್. ಏಂಡ್ರೂಸ್ ಸ್ಮಾರಕವೆಂದು ಕೂಡಿದ 5 ಲಕ್ಷ ರೂಪಾಯಿಗಳಲ್ಲಿ ಶಾಂತಿನಿಕೇತನದಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಲು ಗೊತ್ತಾಗಿದ್ದು ಅದರ ಯೋಜನೆಯ ವಿವರಗಳೇಗ ಮಹಾತ್ಮರಿಡೆಗೆ ಬಂದಿವೆ. ಮಹಾತ್ಮ ಗಾಂಧಿಯವರು ನಿಧಿಯ ಹಣವನ್ನು ಹೆಚ್ಚು ಉಪಯುಕ್ತವಾಗಿ ಎಂತು ವ್ಯಯ ಮಾಡಬಹುದೆಂಬ ಬಗ್ಗೆ ತಮ್ಮ ಸಲಹೆ ಕಳಿಸಿರುವರು.

ಗುಜರಾಥದಲ್ಲಿ ನೆರೆಯಿಂದ ಪೀಡಿತರಾದವರ ಪರಿಹಾರಕ್ಕಾಗಿ 5 ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂದು ಗುಜರಾಥ ಕಾಂಗ್ರೆಸ್ಸಿಗರು ನಿರ್ಧರಿಸಿದರು.

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀ ಆರಮೇರಿ ಗ್ರಾಮದ ಉದಿಯಂಡ, ನಾಯಕಂಡ, ಅಳಮುಂಡ, ಪೊಯ್ಯಟ್ಟಿರ, ಬಾಚಿರ & ಪೂಳಂಡ ಮನೆಯವರು	50
,, ಅಮ್ಮಣಕುಟ್ಟಂಡ ಗಣಪತಿಯವರು	25
,, ಎಂ. 'ಚಾರುದತ್ತರವರು'	15
,, ಕೊಂಗೆಟ್ಟಿರ ಮುದ್ದಪ್ಪನವರು	10
,, ಮಿಸೆಸ್ ಕೋದಂಡ ಅಪ್ಪಯ್ಯನವರು	10
ಮಹಿಳಾ ಸಹಕಾರ ಸಮಾಜ, ವೀರಾಜಪೇಟೆ	10
ಶ್ರೀ ಕನ್ನಂಡ ನಂಜಪ್ಪನವರು	5

3 ರೂ. ಕೊಟ್ಟವರು.

ಶ್ರೀ ಗಳಾದ ಮಲಚಿರ ಬೆಳ್ಯಪ್ಪ, ಕೊಡಂದೇರ ಸುಬ್ಬಯ್ಯ, ಬೊಳ್ಳಚಿಟ್ಟಿರ ಅಚ್ಚಯ್ಯ ಇವರುಗಳು. ಈ ವರೆಗೆ ಒಟ್ಟು ರೂ 9,213 ಆಗಿದೆ.

—oo—

ನಂಬಿಕೆಗರ್ಹವಾದ ಸಂಖ್ಯೆಗಳು.

23ನೇ ತ್ರೈವಾರ್ಷಿಕ ಮೌಲ್ಯಗಣನೆ:

ಮೂರು ವರ್ಷಗಳ ಐನ್ ಲಾಭ 1,50,88,092.

ವಿಮಾದಾರರ ಕ್ಲೇಮು ನಿಧಿ 54 ಲಕ್ಷ ಸೇರಿಸಿದೆ.

ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%

ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ

ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಜೇರಿ–ಬೊಂಬಾಯಿ.

ಶಾಖೆ–'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.

ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವರೋಡು, ಮಂಗಳೂರು.

ಧಾತುವೃದ್ಧಿ ರಸಾಯನ [ZANDU]

"ರ್ಯಾಕ್ಟೋ—ಫಾಸ್‌ಫೋ—ವೊಲ್ಟ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ

ಈ ರಸಾಯನವು ಕಾಮುಕಳಿಯನಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯಾಗಿರುವುದು. ಇದರಲ್ಲಿ ನವೆಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೊಬ್ಬು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್‌ಫೋವೊಲ್ಟ್, ಹೆಮೋಗ್ಲೋಬಿನ್, ಸೋಡಿಗ್ಲಿಸರೊ ಫಾಸ್ಫೇಟ್ ಪೊಟ್ಯಾಸ್, ಸಾಲ್, ವೊಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂತೆ ನಿದೇ ಇಂಜಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಪಾವುಗಳಲ್ಲಿವೆ.

ಝಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.

ಎಂಪ್ಲೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(40) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.

ಒಟ್ಟು ಆದಾಯ	೯೭,೩೭,೦೦೦ ರೂ.	ಮೊದಿದೆ
ಚಾಲ್ತಿಯಿರುವ ವಿಮೆಗಳು	೪,೪೯,೮೮,೦೦೦ ,,	,,
ಆಸ್ತಿ	೬,೩೦,೪೬,೦೦೦ ,,	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	೮,೩೮,೦೦,೦೦೦ ,,	,,

ಆಂಗ ಕಛೇರಿ: ಡಿಸ್ಪೆಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪ್ಲೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರೂ ಪಿ ಕ್ರಾಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ ಯೋಗ್ಯವೆಂದು ನಿಮ್ಮ **1944** ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. **91,99,125.**

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಛೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತಿಗೆ ಬರೆಯಿರಿ:-

ಯೊ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟ ಬ್ರಾಂಚ್ ಮೇನೇಜರ್, ಮಂಗಳೂರು.

(35)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು 95,060, ಜನೂಬಂದ ಠೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡ ಆಗುತ್ತೆ. ನಿರಖು ಠೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇ ಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇ 0-8-0.

ಪರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಫಿಲಿಪ್ಸರ ಪತ್ರದ ಪ್ರಕರಣ.

ಬರ್ಮಾ ಮತ್ತು ಜಪಾನರ ವಿರುದ್ಧ ನಡೆಯಲಿರುವ ಯುದ್ಧದಲ್ಲಿ ಹಿಂದೂಸ್ಥಾನವು ಮಿತ್ರವಾಗಿರುವಂತೆ ಅದ್ರವಾಗಿರುವಂತೆ ಬಿಬಿಯು ನಿರ್ವಾದದ್ದು. ಆದ್ದರಿಂದ, ಹಿಂದೂಸ್ಥಾನವು ಉದಾಸೀನ ಇಲ್ಲವೇ ವಿರೋಧಿಸಿ ಭವನೆಯುಳ್ಳದ್ದಾಗಿರದೆ, ಸಹಾನುಭೂತಿ, ಸಹಕಾರಿಯಾಗಿರುವುದು ಅವಶ್ಯ. ಜಪಾನಿನ ವಿರುದ್ಧ ಹೋರಾಟದಲ್ಲಿ ನಾವು (ಅಮೇರಿಕನರು) ಪ್ರಮುಖ ಹೊಣೆಯನ್ನು ಹೊರಬೇಕಾಗಿದೆ. ಯೊಕೆಂದರೆ ಬ್ರಿಟಿಷರು ತೋರಿಕೆಯ ಸಹಾಯವನ್ನು ಮಾತ್ರ ಕೊಡುವಂತೆ ಕೋರುತ್ತದೆ."

'ಹಿಂದೂಸ್ಥಾನವು ಕೇವಲ ಕಾಯಿದೆ ದೃಷ್ಟಿಯಿಂದ ಈಗಿನ ಯುದ್ಧದಲ್ಲಿ ಎಳೆಯಲ್ಪಟ್ಟಿದೆ. ಹಿಂದುಸ್ಥಾನದಲ್ಲಿರುವ ಕಾಯಿದೆ ಮಂಡಲದ್ದೆಯು ಮಂತ್ರಿಗಳನ್ನು ಕೂಡ ಔಪಚಾರಿಕವಾಗಿಯಾದರೂ ಕೇಳದೆ ಹಿಂದೂಸ್ಥಾನವನ್ನು ಯುದ್ಧಾಸಕ್ತ ರಾಷ್ಟ್ರನೆಂದು ಬ್ರಿಟನು ಸಾರಿತು. ಹಿಂದೂಸ್ಥಾನ ಸರಕಾರದಲ್ಲಿ ತಮ್ಮದೇನೂ ಅಂಗವಿಲ್ಲವೆಂದೂ, ಆದ್ದರಿಂದ ಈಗಿನ ಯುದ್ಧದ ಹೊಣೆಯು ತಮ್ಮ ಮೇಲೆ ಏನೂ ಇರುವದಿಲ್ಲವೆಂದೂ ಹಿಂದೀಯರ ಭಾವನೆಯಾಗಿದೆ. 'ಸಂಯುಕ್ತ ರಾಷ್ಟ್ರಗಳ ಯುದ್ಧೋದ್ದೇಶಗಳಿಗೆ ತಮ್ಮದೇನೂ ಸಂಬಂಧವಿಲ್ಲದ್ದರಿಂದ ತಾವು ಏತಕ್ಕಾಗಿ ಹೋರಾಡಬೇಕು?" ಎಂದು ಹಿಂದೀಯರು ಕೇಳುತ್ತಾರೆ. ಬ್ರಿಟಿಷ್ ಮುಖ್ಯ ಮಂತ್ರಿಗಳಾದ ಚರ್ಚಿಲ್ಲರು 'ಅಟ್ಲಾಂಟಿಕ್ ಚಾರ್ಟರ್'ನ ತತ್ವಗಳು ಹಿಂದೂಸ್ಥಾನಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಈ 'ಚಾರ್ಟರ್'ವು ಕೇವಲ ಬಿಳೀ ಜನರ ಸಲುವಾಗಿರುವುದೆಂದು ಹಿಂದೀಯರು ತಿಳಿದುಕೊಂಡರೆ ಅ ಸ್ವಾಭಾವಿಕವಾದದ್ದೆನಿಸಲಾರದು.

ಈ ಯುದ್ಧದಲ್ಲಿರುವ ಹಿಂದೀ ಸೈನ್ಯವು ಬಾಡಿಗೆಯದಾಗಿರುವುದು. ದುಡ್ಡಿಗಾಗಿ ಯುದ್ಧ ಮಾಡುವ ಸೇನೆಯಾಗಿದೆ. ಜ. ಸ್ಟಿಲ್‌ವೆಲ್ಲರು ಈ ವಿಷಯದಲ್ಲಿ ತಮ್ಮ ವಿವಂಚನೆಯನ್ನು ವ್ಯಕ್ತ ಮಾಡಿರುವರು. ಹಿಂದೀ ಸೈನ್ಯಾಧಿಕಾರಿಗಳ ವ'ನೋಧೈರ್ಯವು (Morale) ತೃಪ್ತಿಕರವಾಗಿಲ್ಲವೆಂದು ಅವರ ಅಭಿಪ್ರಾಯವಾಗಿದೆ. ಜನ ಸಾಮಾನ್ಯರು ಈಗಿನ ಯುದ್ಧದ ಕಡೆಗೆ ನೋಡುವ ದೃಷ್ಟಿಯಂತೂ ಕೆಟ್ಟುಹೋಗಿದೆ. ದೇಶದಲ್ಲಿರುವ ಭಯಂಕರ ಬರಗಾಲ, ದಿನಾಲು ಬೆಳೆಯುತ್ತಿರುವ ಜೀವನದ ವೆಚ್ಚ ಹಾಗೂ ರಾಜಕೀಯ ಬೆಳವಣಿಗೆಗಳಿಂದ ಜನತೆಯಲ್ಲಿ ಉದಾಸೀನತೆ, ಬೇಸರಿಕೆಗಳು ಕಂಡು ಬರುತ್ತವೆ. ಹಿಂದೂಸ್ಥಾನದಲ್ಲಿ ಅನೇಕ ರಾಜಕೀಯ ಪಕ್ಷಭೇದಗಳಿದ್ದರೂ, ಬ್ರಿಟಿಷ ರಾಳಿಕೆಯಿಂದ ಸ್ವತಂತ್ರರಾಗಬೇಕೆಂಬುದರಲ್ಲಿ ಮಾತ್ರ ಒಮ್ಮತವಿದೆ.

ಇಂಥಾ ಅಸಮಾಧಾನಕರವಾದ ಪರಿಸ್ಥಿತಿಯಲ್ಲಿ ನಾವು ಸಿಕ್ಕಿ ಪೇಚಾಡುತ್ತಿದ್ದೇವೆ. ಈ ಪರಿಸ್ಥಿತಿಯು ಸುಧಾರಿಸಬೇಕಾದರೆ ಒಂದೇ ಒಂದು ಉಪಾಯವಿದೆ. ಈ ಯುದ್ಧದಲ್ಲಿ ಹಿಂದೀ ಜನತೆಯು ಸಂಯುಕ್ತ ರಾಷ್ಟ್ರಗಳ ಕೂಡ ಹೊಣೆಯೆನ್ನು ಹೊರ ಬೇಕೆಂದೂ ಆ ಬಗ್ಗೆ ಅವರಿಗೆ ನಾವು ಸೌಕರ್ಯಗಳನ್ನು ಒದಗಿಸಿಕೊಡುವೆಂದೂ ಭಾರತೀಯರಿಗೂ ಗೊತ್ತಾಗಬೇಕು. ಮುಂದೆ ಪ್ರಪಂಚದ ಪುನರ್ರಚನೆಯಲ್ಲಿ ಹಿಂದುಸ್ಥಾನಕ್ಕೂ ಸ್ಥಾನವಿದೆಯೆಂಬುದು ಹಿಂದೀಯರಿಗೆ ಅನಿಸಬೇಕು. ಆದರೆ ಈ ವಿಷಯದಲ್ಲಿ ಅಲ್ಲಿಯ ಈಗಿನ ರಾಜಕೀಯ ಪರಿಸ್ಥಿತಿಯು ಅನುಕೂಲವಾಗಿಲ್ಲ. ಹಿಂದೀಯರ ವಿಶ್ವಾಸವನ್ನು ಸಂಪಾದಿಸಬೇಕಾದರೆ ಬ್ರಿಟಿಷ್ ಸರಕಾರವು 'ಯುದ್ಧ ಮುಗಿದ ಕೂಡಲೇ ಸ್ವಾತಂತ್ರ್ಯ ಕೊಡಲಾಗುವದೆ'ಂದು ಹೇಳಬೇಕು. ಬರಿ ಶಬ್ದಗಳಿಂದ ಕಾರ್ಯವಾಗದು. ಬ್ರಿಟಿಷರು ಕೂಡಲೇ ಕಾರ್ಯ ಪ್ರವೃತ್ತರಾಗಬೇಕು. ಯುದ್ಧ ಮುಗಿದ ಇಂತಿಷ್ಟು ವರ್ಷಗಳಲ್ಲಿಯೇ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವೆನೆಂಬ ಘೋಷಣೆಯನ್ನು ಚಕ್ರವರ್ತಿಗಳು ಕೂಡಲೇ ಮಾಡಬೇಕು. ಈ ಘೋಷಣೆಯ ಪ್ರಾಮಾಣಿಕತೆಯ ನಿದರ್ಶನವೆಂದು ಹಿಂದೂಸ್ಥಾನದಲ್ಲಿ ಸಮ್ರಾಟ್ರ ಪ್ರತಿನಿಧಿ ಸರಕಾರವನ್ನು ಸ್ಥಾಪಿಸಿ ಅದಕ್ಕೆ ವಿಶಿಷ್ಟವಾದ ಅಧಿಕಾರವನ್ನು ಕೊಡಬೇಕು.

ನಮ್ಮ ಮಿಲಿಟರಿ ಪರಿಸ್ಥಿತಿಯ ಮೂಲಕ ನಮಗೆ ಹಿಂದೂಸ್ಥಾನದ ಭವಿತವ್ಯದ ಬಗ್ಗೆ ಆಸ್ಥೆ ಇರುವದು ಅವಶ್ಯವೆಂದು ನನಗನಿಸುತ್ತದೆ. ಹಿಂದೂಸ್ಥಾನದ ವಿಷಯದಲ್ಲಿ ಅಮೇರಿಕವರಿಗೆ ಏನೂ ಸಂಬಂಧವಿಲ್ಲವೆಂದು ಬ್ರಿಟಿಷರು ಹೇಳುವದು ಯೋಗ್ಯವಾಗಲಾರದು. ಜಪಾನಿನ ವಿರೋಧ ಹೋರಾಟದಲ್ಲಿ ನಾವು ಮುಖ್ಯ ಪಾತ್ರವನ್ನು ವಹಿಸಬೇಕಾದುದೆಂದು ಬ್ರಿಟಿಷರು ಹೀಗೆ ಹೇಳುವದು ನ್ಯಾಯವಾಗಿಲ್ಲ. ನಾವು ಬ್ರಿಟಿಷರ ಈ ಮಾತಿಗೆ ಒಪ್ಪಿದರೆ ಹಿಂದೂಸ್ಥಾನದ ಆಂತರಿಕ ಸಂಬಂಧ ಪರಿಸ್ಥಿತಿಯನ್ನು ಎದುರಿಸುವ-ಪ್ರಸಂಗವು ನಮಗೊದಗದಿರಲಾರದು. ಕೋಟ್ಯಾವಧಿ ಹಿಂದೀಯರಲ್ಲಿ ನೆಲೆಸಿದ ಬಿಳಿಯರ ವಿರೋಧವನ್ನು ನಾವು ಎದುರಿಸಬೇಕಾಗುವದು.

ವಿಶ್ವಾದ ಜನರು 'ಈಗಿನ ಯುದ್ಧವು 'ಫ್ಯಾಸಿಸ್ಟ್' ಮತ್ತು ಸಾಮ್ರಾಜ್ಯವಾದಿಗಳ ನಡುವಿನ ದಾಗಿದೆ"ಯೆಂದು ತಿಳಿದುಕೊಂಡಿದ್ದಾರೆ. ಬ್ರಿಟಿಷರು ಈಗ ಹಿಂದೂಸ್ಥಾನದ ವಿಷಯದಲ್ಲಿ ಔದಾರ್ಯವನ್ನು ತೋರಿಸಿದರೆ ಈ ಭಾವನೆಯು ಇಲ್ಲದಾಗಬಹುದು. ಆಗ ಹಿಂದೂಸ್ಥಾನವು ಜಪಾನರ ವಿರೋಧ ನಡೆಯುವ ಹೋರಾಟದಲ್ಲಿ ಹೆಚ್ಚಿಚ್ಚು ಸಹಾಯ, ಸಹಕಾರಗಳನ್ನು ನೀಡುವದು ಖಂಡಿತ."

'ಸೆತ್ಯಕ್ಕೆ ಸಾವಿಲ್ಲ"ವೆಂಬ ನಾಣ್ನುಡಿಯ ಪ್ರತ್ಯಂತರವು ಫಿಲಿಪ್ಸರ ಈ ಪ್ರಕರಣದಿಂದ ನಮ್ಮೆಲ್ಲರ ಅನುಭವಕ್ಕೆ ಚೆನ್ನಾಗಿ ಬಂದಿದೆ.

ಫಿಲಿಪ್ಸರ ವರದಿಯೂ, ಪತ್ರವೂ ಒಪ್ಪಿಸಲ್ಪಟ್ಟು ಒಂದು ವರ್ಷವಾದರೂ ಆಯಿತು. ಆದರೂ ಅವುಗಳನ್ನು ಗೋಪ್ಯವಾಗಿಯೇ ಇಡಲಾಗಿತ್ತು. ಫಿಲಿಪ್ಸರು ಹಿಂದೂಸ್ಥಾನದಿಂದ ಹೋದನಂತರ ಅವರನ್ನು ಲಂಡನಿನಲ್ಲಿ ಜ. ಸಿಸೆನ್ ಹೋವರ್ಳು ರಾಜಕೀಯ ಸಲಹೆಗಾರರೆಂದು ನೇಮಿಸಲಾಯಿತು. ಈಗ ಒಮ್ಮಿಂದೊಮ್ಮೆಲೇ ಅವರು ಆ ಕೆಲಸಕ್ಕೆ ರಾಜಿನಾಮೆ ಕೊಟ್ಟು ಅಮೇರಿಕಕ್ಕೆ ತಿರುಗಿ ಬರುವ ಸುದ್ದಿಯಿಂದ ಅಮೇರಿಕದಲ್ಲಿ ತರ್ಕವಿತರ್ಕಗಳಿಗೆ ಆಸ್ಪದವುಂಟಾಯಿತು. ಆ ಮೇಲೆ ಅವರ ಪತ್ರವು ಅಮೇರಿಕದ ಪತ್ರಿಕೆಗಳಲ್ಲಿ ಹೇಗೋ ಪ್ರಸಿದ್ಧವಾಯಿತು. ಹೀಗೆ ಗೌಪ್ಯ ಸ್ಫೋಟವಾದುದರಿಂದ ಲಂಡನ್, ವಾಷಿಂಗ್ಟನ್ ಸರಕಾರಗಳಿಗೆ ದಿಗಿಲು ಬಿದ್ದಂತಾಗಿದೆ. ಇಂಗ್ಲೆಂಡಿನ ಮುಖ್ಯ ಮಂತ್ರಿ ಚರ್ಚಿಲ್, ವಿದೇಶಮಂತ್ರಿ ಈಡೆನರ ಪಿತ್ತವು ತಲೆಗೇರಿತು. 'ಇಂಥಾ ಸಾಮ್ರಾಜ್ಯಾರು ಫಿಲಿಪ್ಸರನ್ನು ಸಾವು ಸದೆ ಬಡಿಯುವೆವು' ಎಂಬ ಸಿಟ್ಟಿನ ಉದ್ಗಾರವು ಈಡೆನರ ಬಾಯಿಯಿಂದ ಹೊರಬಿದ್ದ ಸುದ್ದಿಯೂ ಇದೆ. ಇತ್ತ ಅಮೇರಿಕದ ಜನತೆಯೂ ಉದ್ರೇಕಗೊಂಡಿದೆ. 'ಅಮೇರಿಕನ್ ರಾಷ್ಟ್ರವು ಇಷ್ಟು ನಿರ್ಬಲವಾಗಿದೆಯೇ? ಅಮೇರಿಕದ ಅಧ್ಯಕ್ಷರಿಗೂ ಕೂಡ ತಮ್ಮ ಮಿತ್ರ ರಾಷ್ಟ್ರದ ವಿಷಯದಲ್ಲಿ ನಿಜವಾದ ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಅಧಿಕಾರವಿಲ್ಲವೇ?' ಎಂಬ ಉದ್ಗಾರಗಳನ್ನು ಮಿ. ಶಾಂಡ್ಲರರೆಂಬ ಸಿನೇಟ್ ಸದಸ್ಯರು ತೆಗೆದಿದ್ದಾರೆ.

ಮಿ. ಫಿಲಿಪ್ಸರನ್ನು ಹಿಂದಕ್ಕೆ ಕರೆಸಲು ಯಾರು ಕಾರಣರೆಂಬದರ ಬಗ್ಗೆ ಊಹಾಪೋಹಗಳು ನಡೆದಿದೆ. ಬ್ರಿಟಿಷ್ ಸರಕಾರದ ಒತ್ತಾಯದಿಂದಲೇ ಅವರನ್ನು ಹಿಂದಕ್ಕೆ ಕರಿಸಬೇಕಾಯಿತೆಂದು ಅಮೇರಿಕದ ಜನತೆಯು ಭಾವಿಸಿದೆ. ಬ್ರಿಟಿಷ್ ರಸಕಾರವು ಫಿಲಿಪ್ಸರು 'ಅನಿಷ್ಟ ವ್ಯಕ್ತಿ' (Persona non-grata) ಗಳೆಂದು, ತಿಳಿಯಬೇಕೆಂದು ಅಮೇರಿಕನ್ ಸರಕಾರಕ್ಕೆ ತಿಳಿಸಿದ್ದು ಈಗ ಪ್ರಕಟವಾಗಿದೆ. ಫಿಲಿಪ್ಸರು 'ಮೊದಲೇ ನಿರ್ಧರಿಸಿದಂತೆ' ಈಗ ಸ್ವದೇಶಕ್ಕೆ ಮರಳಿ ಬರುತ್ತಿರುವರೆಂದೂ ಹೇಳಲಾಗುತ್ತಿದೆ. ಆದರೆ ಶಾಂಡ್ಲರರು ಹಿಂದುಸ್ಥಾನ ಸರಕಾರದ ಪರರಾಷ್ಟ್ರ ಖಾತೆಯ ಸೆಕ್ರೆಟರಿಗಳಾದ ಮಿ. ಕ್ಯಾರೋ ಒಲಾಫರು ಲಂಡನ್ ಸರಕಾರಕ್ಕೆ ಕಳಿಸಿದ ತಾರೊಂದನ್ನು ಪ್ರಸಿದ್ಧಿಸಿ, ಹಿಂದೂಸ್ಥಾನ ಸರಕಾರದ ಸೂಚನೆಯಂತೆ ಫಿಲಿಪ್ಸರನ್ನು 'ಅನಿಷ್ಟ ವ್ಯಕ್ತಿ'ಯೆಂದು ನಿರ್ಧರಿಸಿ ಅವರು ತಿರುಗಿ ಮನೆಗೆ ಹೋಗುವಂತಾಯಿತೆಂಬದನ್ನೂ ಹೊರಗೆಡವಿದ್ದಾರೆ. ಫಿಲಿಪ್ಸರು ರೂಜವೆಲ್ಟರಿಗೆ ಬರೆದ ಇನ್ನೊಂದು ಗುಪ್ತ ಪತ್ರವೂ ಶಾಂಡ್ಲರರ ಕೈಯ್ಯಲ್ಲಿದೆಯಂತೆ. ಪ್ರಸಂಗ ಬಂದರೆ ಅದನ್ನೂ ಸಿನೇಟಿನಲ್ಲಿ ಓದಿ ಹೇಳುವೆನೆಂದು ಅವರು ಹೇಳಿದ್ದಾರೆ.

'ಹು. ಗ.'